**ಡಿ.ಡಬ್ಲ್ಯು: 5**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ: 06-02-2026**

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಆರ್.ಎನ್ ವಕೀಲರಿಂದ,**

ಮಾವಳ್ಳಿ ಗ್ರಾಮದ ದಾವಾ ಸರ್ವೆ ನಂಬರ 680/2 ರ ಒಟ್ಟು ಕ್ಷೇತ್ರ 36 ಗುಂಟೆ ಇತ್ತು. ಸದ್ರಿ ಆಸ್ತಿಯ ಪೂರ್ತಿ ಕ್ಷೇತ್ರ ಎಷ್ಟು ಎಂಬುದು ನನಗೆ ಗೊತ್ತಿಲ್ಲ. ಸದ್ರಿ ದಾವಾ ಸರ್ವೆ ನಂ.680/2 ರ ಒಟ್ಟು ಕ್ಷೇತ್ರ ಎಷ್ಟು ಇತ್ತು ನಮ್ಮ ವಕೀಲರಿಗೆ ಹೇಳಿ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಸರ್ವೆ ನಂ.680/2 ಮೂಲ ಮಾಲೀಕರಿಗೆ ಹೇಗೆ ಬಂತು ಎಂದರೆ ಸಾಕ್ಷಿ ಅದು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿತ್ತು. ಸದ್ರಿ ಮೂಲ ಮಾಲೀಕರಿಂದ ಅಬ್ದುಲ ಖಾದೀರ ಎನ್ನುವವರು ಖರೀದಿ ಮಾಡಿದ್ದರು, ಅವರಿಂದ ನಾನು ಖರೀದಿ ಮಾಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ದಾವಾ ಆಸ್ತಿಯನ್ನು ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದರು. ಖರೀದಿ ಮಾಡಿಕೊಳ್ಳುವಾಗ ವಿಭಾಗ ಪತ್ರವನ್ನು ನೋಡಿರುತ್ತೇನೆ, ಆದರೆ ಅದು ಯಾವ ವರ್ಷದಲ್ಲಿ ವಿಭಾಗ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಅಬ್ದುಲ ಖಾದೀರ ಯಾವ ವರ್ಷದಂದು ಕ್ರಯ ಮಾಡಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಅಬ್ದುಲ ಖಾದೀರ ನಮಗೆ ಮೇಲೆ ಹೇಳಿದ ದಾವಾ ಆಸ್ತಿಯನ್ನು ಕ್ರಯಕ್ಕೆ ಕೊಡುವಾಗ ವಿಭಾಗ ಆದ ಬಗ್ಗೆ ಕ್ರಯ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂ.680/2 ರ ಕ್ಷೇತ್ರ 1 ಎಕರೆ 32 ಗುಂಟೆ ಪೈಕಿ 5 ಗುಂಟೆ ಖರಿದಿ ಮಾಡಿಕೊಂಡಿದ್ದೇನೆಂದು ಕ್ರಯ ಪತ್ರದಲ್ಲಿ ಬರೆಯಲಾಗಿದೆ. ಆದರೆ ಅದರ ಒಟ್ಟು ಕ್ಷೇತ್ರ ಎಷ್ಟು ಎಂಬುದು ಅದರಲ್ಲಿ ಬರೆದಿರುವುದಿಲ್ಲ. ಖರಿದಿ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ನಾನು ಓದಿ ನೋಡಿರುತ್ತೇನೆ. ಖರಿದಿ ಆಗುವ ಪೂರ್ವದಲ್ಲಿ ವಿಭಾಗ ಆಗಿತ್ತು ಎಂದು ದಸ್ತಾವೇಜನಲ್ಲಿ ಬರೆಯಲು ಹೇಳಿರುವುದಿಲ್ಲ. ಖರಿದಿ ಪತ್ರವನ್ನು ಯಾರು ಬರೆದಿರುತ್ತಾರೆ ಎಂಬುದು ನನಗೆ ನೆನಪಿರುವುದಿಲ್ಲ. 12ನೇ ಪ್ರತಿವಾದಿ ಅಬ್ದುಲ ಖಾದೀರ 36 ಗುಂಟೆ ಕ್ಷೇತ್ರವನ್ನು ಮೂಲ ಮಾಲೀಕರಿಂದ ಖರೀದಿ ಮಾಡಿದ ಮೂಲ ದಸ್ತಾವೇಜವನ್ನು ನಾನು ನೋಡಿರುವುದಿಲ್ಲ.

12ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ, ಪ್ರತಿವಾದ ಪತ್ರ ಮತ್ತು ದಾಖಲೆಗಳು ಸಲ್ಲಿಸಿದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವೆ ದಾಖಲಿಸಿದ ನಂತರ 12ನೇ ಪ್ರತಿವಾದಿಯನ್ನು ಸಂಪರ್ಕಿಸಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವೆ ದಾಖಲಿಸಿದ ನಂತರ ದಾವಾ ಸರ್ವೆ ನಂ.680 ರಪೈಕಿ ವಾದಿಯರಿಗೆ ಎಷ್ಟು ಪಾಲು ಬರುತ್ತದೆ ಅಥವಾ ಎಷ್ಟು ಪಾಲು ಕೊಟ್ಟಿದಾರೊ ಎಂಬುದನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡುವಾಗ 1ನೇ ವಾದಿ

ಅಪ್ರಾಪ್ತ ವಯಸ್ಕನಾಗಿದ್ದ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿಯ ತಂದೆ ಯಾವಾಗ ಮರಣ ಹೊಂದಿದ್ದಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. 1ನೇ ವಾದಿಯ ತಂದೆ ಈಶ್ವರ ನಾಯ್ಕ ಇವರ ಪರಿಚಯ ಇರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 1ನೇ ವಾದಿಯ ತಂದೆ , 2ನೇ ವಾದಿಯ ಗಂಡ ಈಶ್ವರ ನಾಯ್ಕ ಇವರು ದಿನಾಂಕ 15/03/1997 ರಂದು ಮರಣ ಹೊಂದಿದ್ದಾರೆ ಎಂದು ನಮ್ಮ ವಕೀಲರಿಗೆ ಹೇಳಿ ಬರೆಸಿರುವುದಿಲ್ಲ. ಈಗ ತೋರಿಸುತ್ತಿರುವ ನಿಪಿ-14 ರ 5ನೇ ಪುಟದಲ್ಲಿ ಸರ್ವೆ ನಂ.680/2 ರಲ್ಲಿ 36 ಗುಂಟೆ ಇದೆ ಎಂದು ಬರೆದಿರುತ್ತಾರೆ ಎಂದರ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಸದ್ರಿ ವಿಚಾರವನ್ನು ಬರೆಸಿದ್ದರು ಸಹ, ಬರೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ವಾದಿಯರ ನಡುವೆ ವಿಭಾಗ ಆಗಿದೆ ಎಂದು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಖರಿದಿಸಿದ ದಾವಾ ಆಸ್ತಿ ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬಗಳ ಆಸ್ತಿ ಇದ್ದು ಅವುಗಳಲ್ಲಿ ಪಾಲು ಆಗಿರುವುದು ಇರಲಿಲ್ಲ, ಆದರೂ ಸಹ ಖರಿದಿ ಮಾಡಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಒಟ್ಟು ಕುಟುಂಬಗಳ ಆಸ್ತಿಗಳು ಇದ್ದು, ಅವುಗಳಲ್ಲಿ ಯಾವುದೇ ವಿಭಾಗ ಆಗದೆ ನಾನು ಖರಿದಿ ಮಾಡಿರುವುದರಿಂದ ನಾನು ಸದ್ಭಾವನ ಖರಿದಿದಾರನಾಗವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 12ನೇ ಪ್ರತಿ ಸದ್ಭಾವನ ಖರಿದಿದಾರ ನಾಗರಲಿಲ್ಲ ಮತ್ತು ನಾನು 12ನೇ ಪ್ರತಿವಾದಿಯಿಂದ ದಾವಾ ಆಸ್ತಿ ಖರಿದಿ ಮಾಡಿರುವುದರಿಂದ ನಾನು ಸಹ ಸದ್ಭಾವನ ಖರಿದಿದಾರನಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೆ ಹಕ್ಕು ಪ್ರಾಪ್ತ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಖರಿದೀಸಿದ ದಾವಾ ಆಸ್ತಿ ವಾದಿಯರ ಪಿತ್ರಾರ್ಜಿತ ಒಟ್ಟು ಕುಟುಬಂದ ಆಸ್ತಿ ಇದ್ದು ನಾನು ಕಾನೂನು ಬಾಹಿರಿವಾಗಿ ಖರಿದಿ ಮಾಡಿರುವುದರಿಂದ ನಾನು ಖರಿದಿಸಿದ ಆಸ್ತಿಗೆ ವಾದಿಯರ ಪಾಲಿಗೆ ಯಾವುದೇ ಬಂಧನಕಾರ ಆಗುವುದಿಲ್ಲ ಎಂದರೆ ಸರಿಯಲ್ಲ. 12ನೇ ಪ್ರತಿವಾದಿ ವಾದಿಯರ ಒಟ್ಟು ಕುಟುಂಬವನ್ನು ದಾವಾ ಆಸ್ತಿಗಳನ್ನು ಕಾನೂನು ಬಾಹಿರವಾಗಿ ಖರಿದಿ ಮಾಡಿಕೊಂಡಿರುವುದರಿಂದ ಮತ್ತು 12ನೇ ಪ್ರತಿವಾದಿ ವಾದಿಯರ ಒಟ್ಟು ಕುಟುಂಬದ ಹಣದ ಗರಜಿಗಾಗಿ ಮಾರಾಟ ಮಾಡದೆ ಇರುವುದರಿಂದ ನಾನು ಖರಿದಿ ಪಡೆದುಕೊಂಡ ಆಸ್ತಿಯು ವಾದಿಯರ ಪಾಲಿಗೆ ಬಂಧನಕಾರಕ ಆಗುವುದಿಲ್ಲ ಎಂದರೆ ಸರಿಯಲ್ಲ. 12ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ದಾವೆಯನ್ನು ಪ್ರತಿಪಾದಿಸದೆ ಸಾಕ್ಷಿ ನುಡಿಯದೆ ಇರುವುದರಿಂದ ನಾವು ಸ್ವತಂತ್ರವಾಗಿ ಯಾವುದೇ ಹಕ್ಕು ಪ್ರತಿಪಾದಿಸಲು ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು 12ನೇ ಪ್ರತಿವಾದಿ ಕಾನೂನ ಬಾಹಿರವಾಗಿ ಮತ್ತು

ಮೋಸದಿಂದ ದಾವಾ ಆಸ್ತಿಯನ್ನು ಖರಿದಿ ಮಾಡಿರುವುದರಿಂದ ನಮಗೆ ಯಾವುದೇ ಹಕ್ಕು ಪ್ರಾಪ್ತಿ ಆಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**